Non-Gazetted Officers in the Secretariat (Transfers).

Q.—541. **Sri Y. M. CHANDRASEKHARAIAH** (Kadur).—

Will the Government be pleased to state :—

(*a*) the number of non-gazetted officers in the Secretariat ;

(*b*) whether it is possible to transfer them to other places ;

(*c*) if so, the difficulties that are in the way of transferring them to other places ;

(*d*) whether it has come to their notice that Government business and public works are being delayed owing to their long stay in the same place ?

A.—**Sri A. G. RAMACHANDRA RAO** (Minister for Law and Education) [On behalf Sri K. HANUMANTHAIYA (Chief Minister)].—

(*a*) 551.

(*b*) The suject is under consideration.

(*c*) Does not arise.

(*d*) Not in all cases.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಸೆಕ್ರೆಟೇರಿಯಟ್‌ನಲ್ಲಿ ಈ ಅಧಿಕಾರಿಗಳು ಎಷ್ಟು ವರ್ಷಗಳಿಂದಿದ್ದಾರೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅನೇಕ ವರ್ಷಗಳಿಂದಿದ್ದಾರೆ. ಕೆಲವರು ಈಚೆಗೆ ಬಂದಿರುತ್ತಾರೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಕೆಲವರಂತೂ ಬಹಳ ವರ್ಷಗಳಿಂದಿದ್ದಾರಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹೌದು.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಆ ರೀತಿ ಇರುವವರೆಷ್ಟು ಮಂದಿ ?

ಶ್ರೀ ಎ. ಜಿ. ರಾಮಚಂದ್ರರಾವ್.—ನಂಬ್ಯೆ ತಿಳಿಸುವುದು ಕಷ್ಟ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಅವರನ್ನು ಬೇರೆ ಕಡೆಗೆ ವರ್ಗಾಯಿಸುವ ವಿಚಾರ ಯೋಚಿಸುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಯೋಚಿಸತಕ್ಕ ವಿಚಾರ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಎಷ್ಟು ಕಾಲ ಈ ಯೋಚನೆಗೆ ಹಿಡಿಯುತ್ತದೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದು ಹೇಳುವುದಕ್ಕಾಗುವುದಿಲ್ಲ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—'ಡಿ' ಪ್ರಶ್ನೆಗೆ ಉತ್ತರವಾಗಿ ಸರ್ಕಾರಿ ಕಾರ್ಯಕಲಾಪಗಳು ಮತ್ತು ಸಾರ್ವಜನಿಕ ಕಾರ್ಯಗಳು ನಿಧಾನವಾಗಿರುವುದಕ್ಕೆ ಕಾರಣವಾಗಿ ಇಂಥವರು ಬಹಳ ದಿನಗಳಿಂದ ಒಂದೇಕಡೆ ಇರುವ ಕೆಲವು ಸಂದರ್ಭಗಳಿವೆಯೆಂದು ತಿಳಿಸಿದ್ದೀರಿ. ಆ ಕೆಲವು ಸಂದರ್ಭಗಳಾವುವು ?

ಶ್ರೀ ಎ. ಜಿ. ರಾಮಚಂದ್ರರಾವ್.—ನೋಟೀಸ್.

ಶ್ರೀ ವಿ. ಆರ್. ನಾಯ್ಡು.—ಅನೇಕ ಮಂದಿ ನಾರ್ಜೆಜೆಡ್ ನೌಕರರನ್ನು ಕೇವಲ ಮೂಕಕರ್ಜಿಗಳ ಆಧಾರದ ಮೇಲೆ ವಿಚಾರಣೆ ಇಲ್ಲದೆ ಬದಲಾವಣೆ ಮಾಡಿರುವುದು ಗೊತ್ತೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ನೋಟೀಸ್.

Intermediate College at Malleswaram (Starting).

Q.—162. **Sri V. R. NAIDU** (Malleswaram).—

Will the Government be pleased to state :—

(*a*) whether it has come to their notice that there are two to three thousand students going to the Intermediate College from the extensions of Malleswaram, Srirampuram, Seshadripuram, Munireddypalyam, Rajamahal Guttahalli, etc. ;

(*b*) whether it has come to their notice that the students are experiencing much difficulty owing to the absence of a College nearby ;

(*c*) whether Government would take action to establish an Intermediate College near Malleswaram ?

A.—**Sri A. G. RAMACHANDRA RAO** (Minister for Law and Education).—

(*a*) Yes, but actual figures are not available.

(*b*) No.

(*c*) No.

ಶ್ರೀ ವಿ. ಆರ್. ನಾಯ್ಡು.—ಮಲ್ಲೇಶ್ವರ, ಶ್ರೀರಾಮಪುರ, ಶೇಷಾದ್ರಿಪುರ, ಮುನಿರೆಡ್ಡಿಪಾಳ್ಯ, ರಾಜಾಮಹಲ್ ಗುಟ್ಟಹಳ್ಳಿ ಮುಂತಾದ ಬಡಾವಣೆಗಳಿಂದ ಹೆಚ್ಚುಮಂದಿ ವಿದ್ಯಾರ್ಥಿಗಳು ಕಾಲೇಜ್ ವ್ಯಾಸಂಗಕ್ಕೆ ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹೆಚ್ಚುಮಂದಿ ಬರುತ್ತಿದ್ದಾರೆಂದು ಹೇಳುವುದಕ್ಕಾಗುವುದಿಲ್ಲ ; ಅಲ್ಲಿಂದಲೂ ವಿದ್ಯಾರ್ಥಿಗಳು ಬರುತ್ತಿದ್ದಾರೆ.

ಶ್ರೀ ವಿ. ಆರ್. ನಾಯ್ಡು.—ಈಗಿನ ಇಂಟರ್‌ಮೀಡಿಯಟ್ ಕಾಲೇಜನ್ನು ಆ ಬಡಾವಣೆಗೆ ವರ್ಗ ಮಾಡುವುದಕ್ಕೆ ಸಾಧ್ಯವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಸಾಧ್ಯವಿಲ್ಲ.

ಶ್ರೀ ವಿ. ಆರ್. ನಾಯ್ಡು.—ಆ ಬಡಾವಣೆಗಳ ಪುರನಿವಾಸಿಗಳಿಂದ ಅಲ್ಲಿಗೊಂದು ಕಾಲೇಜು ಅವಶ್ಯಕತೆ ಇದೆಯೆಂದು ಮನವಿಗಳು ಸರ್ಕಾರಕ್ಕೆ ಬಂದಿಲ್ಲವೆ ?